**ಸುಬ್ಬಿ:** ಅಯ್ಯೋ ನಿಮಗೇನು ಬಂತ್ರಿ ಕೇಡು, ಇಷ್ಟೊತ್ತಿನಲ್ಲಿ ಅದೂ ರಾತ್ರಿ 11.50ರ ಗಂಟೆಗೆ ಮೂರು ಪಾಕೆಟ್ ಚಿಪ್ಸ್‌ನ ಗಬಗಬನೆ ತಿನ್ನುತ್ತಿದ್ದೀರಿ?
**ಗುಂಡ:** ಈ ಪಾಕೆಟ್‌ಗಳ ಮೇಲೆ ಎಕ್ಸ್‌ಪೈರಿ ಡೇಟ್ ಇವತ್ತೇ ಇದೆ. ಇನ್ನೇನು ಹತ್ತು ನಿಮಿಷಕ್ಕೆ ಇವು ಎಕ್ಸ್‌ಪೈರಿ ಆಗ್ತವೆ. ಅದಕ್ಕೆ ಈಗಲೇ ತಿಂದ್ ಬಿಟ್ಟೆ!

***

**ಮೇಷ್ಟ್ರು:** ನೀನು ಎಲ್ಲಿ ಹುಟ್ಟಿದೆ?
**ಮರಿ ಗುಂಡ:** ಬೆಂಗಳೂರಿನಲ್ಲಿ ಸರ್.
**ಮೇಷ್ಟ್ರು:** ಬೆಂಗಳೂರಿನ ಯಾವ ಭಾಗದಲ್ಲಿ?
**ಮರಿ ಗುಂಡ:** ಅಯ್ಯೋ, ಭಾಗ ಭಾಗವಾಗಿ ಅಲ್ಲ ಸರ್, ನನ್ ಇಡೀ ದೇಹವೇ ಬೆಂಗಳೂರಿನಲ್ಲಿ ಹುಟ್ಟಿದ್ದು!

***

**ಸೀನ:** ನಮ್ಮ ಅಪ್ಪ ಒಂದ್ ಸಣ್ಣ ಬೆಂಕಿಪೊಟ್ಟಣ ಖರೀದಿ ಮಾಡಿದ್ರೂ, ಅದರಲ್ಲಿ ಸರಿಯಾಗಿ 100 ಕಡ್ಡಿಗಳು ಇದೆಯೇ ಅಂತ ಚೆಕ್ ಮಾಡ್ಕೊಂಡು ಬರ್ತಾರೆ?
**ಮರಿ ಗುಂಡ:** ಅಷ್ಟೇನಾ? ಅದೇ ನಮ್ಮ ಅಪ್ಪ ಆಗಿದ್ರೆ, ಬೆಂಕಿಪೊಟ್ಟಣದಲ್ಲಿರುತ್ತಿದ್ದ ಅಷ್ಟೂ ಕಡ್ಡಿಗಳು ಸರಿಯಾಗಿ ಉರಿಯುತ್ತವಾ? ಇಲ್ವಾ? ಅಂತ ಚೆಕ್ ಮಾಡ್ತಿದ್ರು!

***

**ಸುಬ್ಬ:** ನಿನ್ನೆ ಐ.ಟಿ. ಡಿಪಾರ್ಟ್‌ಮೆಂಟ್‌ನವರು ಕರೆದಿದ್ದ ಇಂಟರ್‌ವ್ಯೂಗೆ ಹೋಗಿದ್ದೆಯಲ್ಲ, ಅಲ್ಲಿ ಏನೆಲ್ಲಾ ಪ್ರಶ್ನೆ ಕೇಳಿದ್ರು?
**ಗುಂಡ:** ಅದಾ... ಒಟ್ಟಿಗೆ ಮೂರ್ನಾಲ್ಕು ಅಧಿಕಾರಿಗಳು ನನ್ನ ಒಂದು ಕುರ್ಚಿಯ ಮೇಲೆ ಕೂಡಿಸಿ ಒಂದೇ ಸಮನೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳ್ತಾನೆ ಇದ್ರು ಕಣಯ್ಯಾ. ಅದ್ರಿಂದ ನಂಗಂತೂ ಭಯಾನೇ ಆಗೋಯ್ತು.
**ಸುಬ್ಬ:** ಅಲ್ವಾ ಮತ್ತೆ. ಐ.ಟಿ. ಇಲಾಖೆ ಅಂದ್ರೆ ಸುಮ್ನೇನಾ? ಪ್ರಶ್ನೆಗಳ ಸುರಿಮಳೆನೇ ಸುರಿಸಿಬಿಡ್ತಾರೆ!
**ಗುಂಡ:** ಅವ್ರ ಬಗ್ಗೆ ನನಗೂ ಗೊತ್ತಿತ್ತು. ಅದ್ಕೆ ಅವ್ರು ಏನ್ ಕೇಳಿದ್ರೂ ನಾನ್ ಮಾತ್ರ ತುಟಿಕ್ ಪಿಟಿಕ್ ಅನ್ನದೇ ಬಾಯಿ ಮುಚ್ಚಿಕೊಂಡು ಕೂತು ಹಾಗೇ ಹೊರ ಬಂದೆ!

***

**ಗುಂಡ:** ನನ್ನ ಹೆಂಡತಿ ಸುಬ್ಬಿ ದಿನಾ ಬೆಳಿಗ್ಗೆ ಎದ್ದ ಕೂಡಲೇ ಏನಾದ್ರೂ ಕಾಟ ಕೊಡ್ತಾನೆ ಇರ್ತಾಳೆ ಸರ್. ಇದ್ರಿಂದ ತಲೆ ಕುಲಗೆಟ್ಟು ಹೋಗಿದೆ. ಅದ್ರಿಂದ ಹೊರಬರೋಕೆ ಯಾವುದಾದ್ರೂ ಚಿಕಿತ್ಸೆ ಇದ್ರೆ ಕೊಡಿ ಸರ್?
**ಡಾಕ್ಟರ್:** ಅಯ್ಯೋ ಗುಂಡಾ... ಅಂತಹ ಚಿಕಿತ್ಸೆ ಇದ್ದಿದ್ದರೆ ನಾನ್ಯಾಕೆ ರಾತ್ರಿ ಹನ್ನೊಂದು ಗಂಟೆವರೆಗೂ ಮನೆಗೆ ಹೋಗದೆ ಕ್ಲಿನಿಕ್ ಓಪನ್ ಮಾಡಿಕೊಂಡು ಸುಮ್ಮನೆ ಕೂರ್ತಿದ್ದೆ!

***

ಸಂಗೀತ ಶಿಕ್ಷಕ ಹುದ್ದೆಯ ಸಂದರ್ಶನಕ್ಕೆ ಗುಂಡ ಹೋಗಿದ್ದ
**ಪ್ರಿನ್ಸಿಪಾಲ್:** ಏನ್ರಿ... ನಿಮಗೆ ಸಂಗೀತ, ಲಯ, ತಾಳದ ಬಗ್ಗೆ ಗೊತ್ತಿದ್ಯಾ?
**ಗುಂಡ:** ಚೆನ್ನಾಗಿ ಗೊತ್ತು ಸರ್. ಸಂಗೀತಾಳನ್ನ ನಾನು ನನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದೆ. ಆದ್ರೆ ಅವ್ಳು ನನಗೆ ಕೈ ಕೊಟ್ಟು ಹೋದಳು. ಆಮೇಲೆ ಲಯಾ ನನ್ನ ಹೊಸ ಗರ್ಲ್ ಫ್ರೆಂಡ್ ಆಗಿ ಬಂದಿದ್ದಾಳೆ. ಅವ್ಳ ಬಗ್ಗೆನೂ ತುಂಬಾ ತಿಳ್ಕೊಂಡಿದ್ದೀನಿ.
**ಪ್ರಿನ್ಸಿಪಾಲ್:** ಹೇ... ಸಾಕು ಮಾಡಿ ನಿಮ್ ಪುರಾಣ. ಹೋಗ್ಲಿ, ಯಾವ ತಾಳ ಗೊತ್ತು? ಅದನ್ನಾದರೂ ಹೇಳಿ?
**ಗುಂಡ:** ಹರತಾಳ ಸರ್! ಅದರಲ್ಲಿ ನನ್ನಷ್ಟು ಎಕ್ಸ್‌ಪರ್ಟ್ ಯಾರೂ ಇಲ್ಲ. ಯಾವಾಗ, ಎಲ್ಲಿ ಹರತಾಳ ಆದ್ರೂ ಅದಕ್ಕೆ ನಾನೇ ಲೀಡರ್!

***

**ಮೇಷ್ಟ್ರು:** 'ಅಷ್ಟೋತ್ತರ' ಎಂದರೇನು?
**ಮರಿ ಗುಂಡ:** ಪ್ರಶ್ನೆ ಎಷ್ಟು ಇರುತ್ತೋ ಅಷ್ಟೇ ಉತ್ತರ ಕೊಡುವುದಕ್ಕೆ ಅಷ್ಟೋತ್ತರ ಅನ್ನುತ್ತಾರೆ ಸಾರ್!
**ಮೇಷ್ಟ್ರು:** ಕತ್ತೆ ಬಡವಾ, ಬಾಯಿಗೆ ಬಂದ ಹಾಗೆ ಹೇಳಬೇಡ. ಹೋಗ್ಲಿ 'ಮರಣೋತ್ತರ' ಎಂದರೆ ಏನು?
**ಮರಿ ಗುಂಡ:** ಅಯ್ಯೋ ತುಂಬಾ ಸಿಂಪಲ್ ಸರ್. ಉತ್ತರ ಬರೆಯುತ್ತಾ ಬರೆಯುತ್ತಾ ಮರಣ ಹೊಂದುವುದು!

***

**ಸುಬ್ಬಿ:** ಈಚೆಗೆ ತಲೆಯಲ್ಲಿ ತುಂಬಾ ಕೂದಲು ಉದರುತ್ತಿವೆ. ಕೂದಲುಗಳನ್ನು ಉಳಿಸಿಕೊಳ್ಳಲು ಏನಾದರು ಸಲಹೆ ಕೊಡಿ?
**ಡಾಕ್ಟರ್:** ಅದಕ್ಕೇಕೆ ಚಿಂತೆ ಮಾಡುತ್ತೀರಿ? ಉದುರುತ್ತಿರುವ ಕೂದಲುಗಳನ್ನು ಆಯ್ದುಕೊಂಡು ಒಂದು ಡಬ್ಬಿಯಲ್ಲಿ ಹಾಕಿ, ವೆರಿ ಸಿಂಪಲ್!

***

**ಸುಬ್ಬಿ:** ಇಲ್ಲಿ ನೋಡ್ರಿ. ನನಗೆ ಎರಡು ಮೆಡಲ್ ಬಂದಿದೆ.
**ಗುಂಡ:** ವೆರಿ ಗುಡ್. ಈ ಚಿಕ್ಕ ಮೆಡಲ್ ಯಾಕೆ ಕೊಟ್ರು?
**ಸುಬ್ಬಿ:** ಹಾಡು ಹೇಳಿದ್ದಕ್ಕೆ ಕೊಟ್ರು.
**ಗುಂಡ:** ಭಲೇ... ಭಲೇ... ಈ ದೊಡ್ಡ ಮೆಡಲ್ ಏನಕ್ಕೆ ಕೊಟ್ರು?
**ಸುಬ್ಬಿ:** ಹಾಡು ನಿಲ್ಲಿಸಿದ್ದಕ್ಕೆ!

***

**ಸುಬ್ಬಿ:** ರೀ... ಇವತ್ತು ಯಾವ ದಿನ ಗೊತ್ತಾ?
**ಗುಂಡ:** ಗೊತ್ತಿಲ್ದೆ ಏನು. ಇವತ್ತು ಶುಕ್ರವಾರ.
**ಸುಬ್ಬಿ:** ಅಯ್ಯೋ ಎಷ್ಟ್ ಬಡ್ಕೊಂಡ್ರೂ ಅಷ್ಟೇ ನಿಮ್ ನೆನಪಿನ ಶಕ್ತಿಗೆ. ಇವತ್ತಿಗೆ ನಮ್ ಮದ್ವೆ ಆಗಿ ಇಪ್ಪತ್ತು ವರ್ಷ ಆಯ್ತು. ಹೋಗ್ಲಿ ನಮ್ ಮದ್ವೆ ವಾರ್ಷಿಕೋತ್ಸವ ಆಚರಿಸೋಣ್ವಾ?
**ಗುಂಡ:** ಅದಕ್ಕೇನಂತೆ, ಐದು ನಿಮಿಷ ಮೌನಾಚರಣೆ ಮಾಡೋಣ ಬಿಡು!

ಸಂಗ್ರಹ: ವೀರೇಶ್ ಕುಮಾರ್, ಬೆಂಗಳೂರು










